ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಲೋಕಾಯುಕ್ತ ಪ್ರಕರಣಗಳ ವಿಚಾರಣ ವಿಶೇಷ ನ್ಯಾಯಾಲಯ, ಕೋಲಾರ

**Spl. C(Corruption) 4/2020**

ಪ್ರಾಸಾಃ **4** ಚಾಸಾಃ **5**
ದಿನಾಂಕಃ **15-04-2024**

ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು.

ಹೆಸರು ಃ- ಜಯಂತಿ ಕೆ
ತಂದೆಯ ಹೆಸರು ಃ- ಸುಬ್ರಮಣಿ
ವಯಸ್ಸು ಃ- 39
ಉದ್ಯೋಗ ಃ- ಶಿಕ್ಷಕಿ
ವಾಸ ಸ್ಥಳ ಃ- ಕಾಮಸಮುದ್ರ

ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ

ನಾನು ಅಕ್ಷರ ಇಂಟರ್ ನ್ಯಾಷನಲ್ ಶಾಲೆ, ತೊಪ್ಪನಹಳ್ಳಿ ಬಂಗಾರಪೇಟೆ ತಾಲ್ಲೂಕಿನಲ್ಲಿ 2013 ರಿಂದ ಮುಖ್ಯೋಪಾಧ್ಯಾಯಕಿಯಾಗಿ ಕೆಲಸ ಮಾಡುತ್ತಿದ್ದೇನೆ.

ನಮ್ಮ ಶಾಲೆ ಟ್ರಸ್ಟಿಯ ಅಧ್ಯಕ್ಷರಾಗಿ ಅಕ್ಕಮ್ಮ, ಕಾರ್ಯದರ್ಶಿಯಾಗಿ ಚಂಗಲರಾಯರೆಡ್ಡಿ, ಸದಸ್ಯರಾಗಿ ಮಲ್ಲಿಕಾರ್ಜುನರೆಡ್ಡಿ ರಮೇಶ, ಸುಮಾರಾಣಿ ಇದ್ದರು. ಚಂಗಲರಾಯರೆಡ್ಡಿ ಮತ್ತು ಮಲ್ಲಿಕಾರ್ಜುನರೆಡ್ಡಿ ಟ್ರಸ್ಟಿನ ಆಗುಹೋಗುಗಳನ್ನು ನೋಡಿಕೊಳ್ಳುತ್ತಿದ್ದರು. ಸದರಿ ಶಾಲೆಯಲ್ಲಿ ಎಲ್.ಕೆಜಿಯಿಂದ 5 ನೇ ತರಗತಿವರಿಗೂ ವಿದ್ಯಾಭ್ಯಾಸ ಕೊಡುತ್ತಿದ್ದೇವೆ.

ನಮ್ಮ ಶಾಲೆಯ 2018-19 ನೇ ಸಾಲಿನ ನವೀಕರಣಗೊಳಿಸಬೇಕಾಗಿತ್ತು. ಚಂಗಲರಾಯರೆಡ್ಡಿ ಮುಖಾಂತರ ಅವರಿಗೆ ಹೇಳಿ ದಾಖಲೆ ಸಮೇತ ನವೀಕರಣಗೊಳಿಸಲು ಅರ್ಜಿ 04-06-2018 ರಂದು ಸಲ್ಲಿಸಿದ್ದೇವೆ. ಅದನ್ನು ನಿಪಿ-1 ಎಂದು ಗುರುತಿಸಲಾಗಿದೆ. (ಪುಟ ಸಂಖ್ಯೆ 38 ರಿಂದ 180)

ತಿಮ್ಮರಾಯಪ್ಪ ಶಿಕ್ಷಣ ಸಂಯೋಜಕರು ಸ್ಥಳ ತನಿಖೆಗಾಗಿ ನಮ್ಮ ಶಾಲೆಗೆ ಬಂದಿದ್ದರು, ಅವರು ಎಲ್ಲಾ ಪರಿಶೀಲನೆ ಮಾಡಿದರು. ನಂತರ ನ್ಯಾಯಾಲಯದ ಮುಂದಿರುವ ಆರೋಪಿ ನಮ್ಮ ಶಾಲೆಗೆ ಬಂದಿರುತ್ತಾರೆ. ಚಂಗಲರಾಯರೆಡ್ಡಿ ಮತ್ತು ಅವರ ಮಗ ಆರೋಪಿ ಬಂದು ಹೋದ ವಿಷಯ ತಿಳಿಸಿದರು. ಆರೋಪಿ ಅವರಿಂದ 25 ಸಾವಿರ ಕೇಳಿದ್ದು 15 ಸಾವಿರ ಪಡೆದುಕೊಂಡಿದ್ದಾರೆ ಎಂದು ಗೊತ್ತಾಯಿತು. ದಿನಾಂಕಃ 03-11-2018 ರಲ್ಲಿ ಆರೋಪಿ ಹತ್ತು ಸಾವಿರ ರೂಪಾಯಿ ಲಂಚದ ಹಣ ಮಲ್ಲಿಕಾರ್ಜುನರೆಡ್ಡಿರವರಿಂದ ಪಡೆಯುವಾಗ ಟ್ರಾಪ್ ಆಗಿದೆ ಎಂದು ಗೊತ್ತಾಯಿತು. ನಾನು ದಿನಾಂಕಃ 13-03-2019 ರಲ್ಲಿ ಎಸಿಬಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಆ ದಿನ ಪೊಲೀಸರಿಗೆ ನಮ್ಮ ಶಾಲೆಯ ಸಂದರ್ಶಕರ ಪುಸ್ತಕದ ದೃಢೀಕೃತ ನಕಲು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ-32 ಎಂದು ಗುರುತಿಸಲಾಯಿತು (ಪುಟ ಸಂಖ್ಯೆ 195 ರಿಂದ 202).

<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಎಂಹೆಚ್ ವಕೀಲರಿಂದಃ</u>

ಈಗಲೂ ಅದೇ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಈ ದಿನ ಮಲ್ಲಿಕಾರ್ಜುನರೆಡ್ಡಿ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿ. ಅವರೇ ನನ್ನನ್ನು ಕರೆದುಕೊಂಡು ಬಂದಿದ್ದಾರೆ.

1 ರಿಂದ 5 ನೇ ತರಗತಿವರೆಗೆ ನವೀಕರಣ ಆಗಬೇಕು ಎಂದು ಅರ್ಜಿ ಸಲ್ಲಿಸಲಾಗಿದೆ. ಎಲ್.ಕೆ.ಜಿ, ಯುಕೆಜಿ ಯಾವ ವರ್ಷದಿಂದ ನಡೆಸಲಾಗುತ್ತಿದೆ ನೆನಪಿಲ್ಲ. ಎಲ್.ಕೆ.ಜಿ ಯುಕೆಜಿ ತರಗತಿಗಳಿಗೆ ಕೋಮಲ ಮೇಡಂ ಪಾಠ ಮಾಡುತ್ತಾರೆ, ಅವರು ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ಗೊತ್ತಿಲ್ಲ. ಎಲ್.ಕೆ.ಜಿ ಯುಕೆಜಿ ರವರಿಗೆ ಹಾಜರಾತಿ ಪುಸ್ತಕ ಇರುತ್ತದೆ. ಎಲ್.ಕೆಜಿ ಯುಕೆಜಿ ಮಕ್ಕಳ ಶಾಲಾ ಫೀ ನಾನೇ ವಸೂಲಿ ಮಾಡುತ್ತೇನೆ. ಅದನ್ನು ಅಕೌಂಟ್-ಗೆ ಹಾಕಲಾಗುತ್ತದೆ. ಆ ಬಗ್ಗೆ ಆಡಿಟ್ ರಿಪೋರ್ಟ್ ಇರುತ್ತದೆ. ಶುಲ್ಕ ರಚನೆ (ಫೀ ಸ್ಟ್ರಕ್ಚರ್) ಸರ್ಕಾರ ನಿಗದಿ ಮಾಡುತ್ತದೆ ಎಂದರೆ ಸರಿ.

ನಾವು ಸರ್ಕಾರ ನಿಗಧಿ ಪಡಿಸಿದ ಶುಲ್ಕಕ್ಕಿಂತ ಜಾಸ್ತಿ ವಸೂಲಿ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಾನು ಮುಖ್ಯೋಪಾಧ್ಯಾಯಳಾಗಿ ಕೆಲಸ ಮಾಡುತ್ತೇನೆ, ಆಡಿಟ್ ಬಗ್ಗೆ ಗೊತ್ತಿಲ್ಲ. 2019 ರವರೆಗೂ ಎಲ್.ಕೆ.ಜಿ ಯುಕೆಜಿ ನಡೆಸಲು ಪರವಾನಿಗೆ ಇರಲಿಲ್ಲ ಎಂದರೆ ನನಗೆ ನೆನಪಿಲ್ಲ. ಅರ್ಜಿಯನ್ನು ಮಲ್ಲಿಕಾರ್ಜುನರವರೇ ಸಿದ್ಧಪಡಿಸಿದ್ದಾರೆ. ಅರ್ಜಿಯನ್ನು ನಾನು ಪರಿಶೀಲನೆ ಮಾಡಿದ್ದೇನೆ. 2018-2019 ರ ಸಾಲಿನಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಇದ್ದರು ನೆನಪಿಲ್ಲ. ನಮ್ಮ ಶಾಲೆಯಲ್ಲಿ ಸರಿಯಾದ ಸೌಲಭ್ಯಗಳು ಇರಲಿಲ್ಲ, ಆಟದ ಮೈದಾನ ಇರಲಿಲ್ಲ, ನೈರ್ಮಲ್ಯಗಳು ಇರಲಿಲ್ಲ ಮತ್ತು ಸರಿಯಾದ ಶೌಚಾಲಯಗಳು ಇರಲಿಲ್ಲ ಎಂದರೆ ಸರಿಯಲ್ಲ. ಈಗ ತೋರಿಸಿದ ಫೋಟೋಗಳು ನಮ್ಮ ಶಾಲೆಗೆ ಸಂಬಂಧಿಸಿದ್ದು ಎಂದರೆ ಸರಿ. ನಮ್ಮ ಶಾಲೆಯ ಸೆಕ್ರೇಟರಿ ಹೇಳಿದಂತೆ ನಾನು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಎಂದಿಗೂ ಲಂಚದ ಹಣಕ್ಕೆ ಬೇಡಿಕೆ ಇಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ರೂ.15000/- ಹಣ ಮೊದಲೇ ಪಡೆದುಕೊಂಡಿದ್ದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಹತ್ತು ಸಾವಿರ ಲಂಚ ಪಡೆಯುವಾಗ ಟ್ರಾಪ್ ಆಗಿದೆ ಎಂದುಗೊತ್ತಾಯಿತು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಏನು ಇಲ್ಲ,

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

ಸಹಿ/-

(ಮಂಜುನಾಥ ಜೆ.ಎ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.